ಆಡದಿದ್ದರೂ ನಡೆಯುತ್ತಿತ್ತು ಎಂದು ಆ ಮಾತುಕತೆ ನಡೆದ ಬಹಳ ದಿನಗಳವರೆಗೂ ಅನ್ನಿಸುತ್ತಿತ್ತು. ತಂದೆತಾಯಿಯರಿಂದ ಕೇಳಿದ ಇಂಥ ಕಟು ನುಡಿಗಳೆಲ್ಲ ಮಕ್ಕಳಿಗೆ ಸ್ವತಃ ಅವರು ಮುದುಕರಾದಾಗಲೂ ನೆನಪಿರುತ್ತವೆ.

"ಮಾಕೋನಿಗೆ ಹಾಗೆಲ್ಲ ಅನ್ನಬಾರದಿತ್ತು ಅನ್ನಿಸಿತು. ಸ್ವೈರಣೆ ತಪ್ಪಿ ಮಾತನಾಡಿಬಿಟ್ಟೆ" ಮೂರು ಸಲ ಕರೆ ಮಾಡಿದರೂ ರಿಸೀವ್ ಮಾಡದ ಟೋರಿಯ ಮೊಬೈಲಿಗೆ ಮೆಸೇಜು ಬಿಟ್ಟೆ. ಅವನು ಮೆಸೇಜು ನೋಡಿದರೂ ಮರು ಉತ್ತರ ಬರೆಯಲಿಲ್ಲ. ಮಾಕೋನ ವಿಚಾರವಾಗಿ ನನ್ನ ತುಮುಲಗಳನ್ನು ಸ್ವಲ್ಪ ಹೆಚ್ಚೇ ಅನ್ನುವಷ್ಟು ಹಂಚಿಕೊಳ್ಳುತ್ತಿದ್ದೇನಲ್ಲ ಟೋರಿಯ ಹತ್ತಿರ ಅಂತ ಪಿಚ್ಚೆನಿಸಿತು. ನನ್ನ ಭಾವನಾತ್ಮಕ ಲಗೇಜನ್ನು ಅವನ್ಯಾಕೆ ಹೊತ್ತುಕೊಳ್ಳಬೇಕು? ತೀರ ಒಳಕ್ಕೆ ಕರೆಯದೆಯೇ ಆಳವಾದ ಸಂಬಂಧಗಳ ಸೃಷ್ಟಿಸಿಕೊಳ್ಳುವುದು ಸಾಧ್ಯವೇ ಇಲ್ಲವೇ ಹಾಗಾದರೆ?

ನನ್ನನ್ನು ಆಘಾತಗೊಳಿಸಿದ್ದು ಮಾಕೋನ ಬಳಿ ತಕರಾರು ತೆಗೆದು ಎರಡು ದಿನ ಕಳೆಯುವುದರೊಳಗೆ ಮತ್ತೆ ಹೆಜ್ಜೆ ಸಪ್ಪಳಗಳು ಕೇಳಲು ಶುರುವಾಗಿದ್ದು. ನನ್ನನ್ನು ಇನ್ನಷ್ಟು ಕುಗ್ಗಿಸಿದ್ದು ರಾತ್ರಿಗಳು ಬದಲಾದಷ್ಟೇ ವೇಗದಲ್ಲಿ ಹುಡುಗಿಯರೂ ಬದಲಾಗತೊಡಗಿದ್ದು. ಅವಳ ನಡಿಗೆಯ ಗತಿ ಇವಳದಕ್ಕಿಂಥ ಬೇರೆ. ಅಪ್ಪಿ ತಪ್ಪಿ ಕೆಮ್ಮಿದಾಗ, ಆ ಶಬ್ದದಿಂದಲೇ ವ್ಯಕ್ತಿಯ ದನಿ ಗುರುತಿಸಬಲ್ಲ ಹಾಗೆ, ತಡರಾತ್ರಿಯ ನಿಶ್ಯಬ್ದದಲ್ಲಿ ಉಸಿರಿನ ಏರಿಳಿತವೂ ಗುಟ್ಟು ಬಿಟ್ಟು ಕೊಡುತ್ತದೆ. ಊರಿದ ಹೆಜ್ಜೆಗಳ ಒತ್ತಿನಲ್ಲಿ, ಪಿಸುದನಿಯು ಹೊರಡಿಸುವ ತರಂಗಗಳಲ್ಲಿ, ಮೈಗೆ ಪೂಸಿಕೊಂಡ ಸುಗಂಧಗಳಲ್ಲಿ ದಿನದಿನವೂ ಚಹರೆಗಳು ಬದಲಾಗುತ್ತಿರುವುದಕ್ಕೆ ಪುರಾವೆಗಳಿವೆ.

ಇವರೆಲ್ಲ ಯಾರು? ಮಾಕೋನ ಜೊತೆಗೆ ಕಲಿಯುತ್ತಿರುವ ಹುಡುಗಿಯರೇ? ನಮ್ಮ ಬೀದಿಯಲ್ಲಿ ಹತ್ತಿರದ

